INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,59-70
Peer Reviewed Journal, Referred Journal

# ಭಾರತದ ಮಹಿಳೆಯರ ಮಾನವ ಹಕ್ಕುಗಳ ರಕ್ಷಣೆಯ ಕಾನೂನು ಕ್ರಮಗಳು

**ಡಾ.ಎಂ.ರಾಚಪ್ಪಾಜಿ.**[1]

ಮಹಿಳೆಯರ ಮಾನವ ಹಕ್ಕುಗಳನ್ನು ರಕ್ಷಣೆಯನ್ನು ಮಾಡುವಲ್ಲಿ ಭಾರತ ಸಂವಿಧಾನದ ಅನ್ವಯ ಕೆಲವು ಇತರ ಕ್ರಮಗಳನ್ನು ಕಾಲಕಾಲಕ್ಕೆ ಸಂಸತ್ತು ತೆಗೆದುಕೊಂಡಿರುತ್ತದೆ. ಹಾಗೆಯೇ ಹಲವು-ಹತ್ತು ಪ್ರಕರಣಗಳು ಸಂವಿಧಾನದ ರಕ್ಷಕವಾಗಿರುವ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿರುತ್ತವೆ. ಅವುಗಳನ್ನು ಪರಿಶೀಲಿಸಿ ತೀರ್ಪುಗಳು ಹಾಗೂ ಸಲಹೆಗಳನ್ನು ಸಂಸತ್ತಿಗೆ ನೀಡಿರುತ್ತದೆ. ಹಾಗಾಗಿ ಭಾರತದ ಸಂಸತ್ತು ಮಹಿಳೆಯರ ಮಾನವ ಹಕ್ಕುಗಳ ರಕ್ಷಣೆಯಲ್ಲಿ ಕೆಲವು ಇತರ ಕ್ರಮಗಳನ್ನು ಕಾನೂನು ಹಾಗೂ ಕಾಯಿದೆಯ ಮೂಲಕ ತೆಗೆದುಕೊಂಡಿರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಆ ಮಾದರಿಯ ಕಾನೂನು ಹಾಗೂ ಕಾಯಿದೆಗಳನ್ನು ವಿಶ್ಲೇಷಿಸಲಾಗಿರುತ್ತದೆ.

**1929ರ ಬಾಲ್ಯ ವಿವಾಹ ನಿಷೇಧ** ಕಾಯಿದೆಯು ಹೆಣ್ಣು ಮಕ್ಕಳ ವಿವಾಹದ ವಯಸ್ಸನ್ನು ಕನಿಷ್ಠ 14 ವರ್ಷಗಳಿಗೆ ನಿಗದಿ ಪಡಿಸುವ ಮುಖೇನ ಬಾಲ್ಯವಿವಾಹವನ್ನು ನಿಷೇಧಿಸಿರುತ್ತದೆ. ಆದರೆ, 2006ರಲ್ಲಿ ಈ ಕಾಯಿದೆಯನ್ನು ಪಡಿಸಿ, ಬಾಲ್ಯ ವಿವಾಹ ತಡೆ ಕಾಯಿದೆ ಎಂದು ಹೊಸ ಕಾಯಿದೆಯೊಂದನ್ನು 2007ನೇ ಜನವರಿ 11ರಂದು ಜಾರಿಗೆ ತರಲಾಗಿದೆ. ಇದರ ಅನ್ವಯ ಬಾಲಕಿಯರಿಗೆ 18 ವರ್ಷಗಳು ಹಾಗೂ ಬಾಲಕರಿಗೆ 21 ವರ್ಷಗಳು ತುಂಬಬೇಕು ಎಂದು ಸೂಚಿಸಿರುತ್ತದೆ. ಮಕ್ಕಳ ಹಕ್ಕುಗಳ ರಕ್ಷಣಾ ಕಾಯಿದೆ-2005ನ್ನು ಭಾರತದಲ್ಲಿ ಗೆಜೆಟ್‌ನಲ್ಲಿ 2006ನೇ ಜನವರಿ 20ರಂದು ಕೇಂದ್ರ ಸರ್ಕಾರವು ಪ್ರಕಟಿಸಿರುತ್ತದೆ. ಇದನ್ನು ಜಾರಿಗೊಳಸಲು ರಾಷ್ಟ್ರೀಯ ಆಯೋಗವನ್ನು 2007ನೇ ಮಾರ್ಚ್ 05ರಂದು ರಚನೆಯನ್ನು ಮಾಡಲಾಗಿರುತ್ತದೆ. ಈ ಆಯೋಗದ ಪ್ರಮುಖವಾದಂಥ ಕಾರ್ಯಗಳು ಹಾಗೂ ಕರ್ತವ್ಯಗಳನ್ನು ಈ ಕೆಳಗಿನಂತೆ ಸೂಚಿಸಲಾಗಿದೆ. ಅವುಗಳೆಂದರೆ; ಮಕ್ಕಳುಗಳನ್ನು ರಕ್ಷಿಸುವುದು ಮತ್ತು ಪೋಷಿಸುವುದು. ದೇಶದಾದ್ಯಂತ ಎಲ್ಲಾ ಕಾನೂನುಗಳು, ನಿಯಮಗಳು ಹಾಗೂ ಕಾರ್ಯಕ್ರಮಗಳು ಮಕ್ಕಳ ಹಕ್ಕುಗಳನ್ನು ಗಮನದಲ್ಲಿಡುವಂತೆ ನೋಡಿಕೊಳ್ಳಬೇಕು. ಮಕ್ಕಳ ಹಕ್ಕುಗಳ ಬಗೆಗೆ ವಿಶ್ವಸಂಸ್ಥೆಯು ಅಂಗೀಕರಿಸಿರುವಂಥ ಒಪ್ಪಂದವನ್ನು ಗೌರವಿಸುವಂತೆ ನೀಗಾವಹಿಸುವುದು.

**1. ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ,ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು**

ಹಾಗೆಯೇ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಪ್ಪಂದಕ್ಕೆ ಭಾರತವು ಡಿಸೆಂಬರ್ 11ನೇ 1992ರಂದು ಸಹಿ ಮಾಡಿರುತ್ತದೆ.

ಮಕ್ಕಳ ಹಕ್ಕುಗಳ ರಕ್ಷಣಾ ಕಾಯಿದೆ-2005ರ 25ನೇ ವಿಧಿಯ ಪ್ರಕಾರ; ಪ್ರತಿಯೊಂದು ರಾಜ್ಯದಲ್ಲಿಯೂ ಮಕ್ಕಳ ಹಕ್ಕುಗಳ ಉಲ್ಲಂಘನೆಯನ್ನು ಕುರಿತಾದಂಥ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಪ್ರತ್ಯೇಕವಾದ ನ್ಯಾಯಾಲಯವನ್ನು ಸ್ಥಾಪಿಸಬೇಕು. ಇದಕ್ಕೆ ಸಂಬಂಧಿಸಿದಂತೆ; 2009ನೇ ಜುಲೈನಲ್ಲಿ ಕನಾಟಕ ರಾಜ್ಯ ಸಕಾರವು ಮಕ್ಕಳ ಹಕ್ಕುಗಳ ಆಯೋಗವನ್ನು ರಚಿಸಿರುತ್ತದೆ. ಹಾಗೆಯೇ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂಥ ಎಲ್ಲಾ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಪ್ರತ್ಯೇಕವಾದಂಥ ನ್ಯಾಯಾಲಯವೊಂದನ್ನು 2012ನೇ ನವೆಂಬರ್‌ನಲ್ಲಿ ಸ್ಥಾಪಿಸಲಾಗಿರುತ್ತದೆ. ಹಾಗೆಯೇ ದೆಹಲಿ, ಸಿಕ್ಕಿಂ, ಗೋವಾ, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ್, ಪಂಜಾಬ್, ಅಸ್ಸಾಂ, ಬಿಹಾರ್, ಛತ್ತೀಸ್‌ಘಡ ಮತ್ತು ಒಡಿಶಾ ರಾಜ್ಯಗಳು ಕೂಡ ಮಕ್ಕಳ ಹಕ್ಕುಗಳ ಆಯೋಗಗಳನ್ನು ರಚಿಸಿಕೊಂಡಿರುತ್ತವೆ. ಈ ಮುಖೇನ ಮಕ್ಕಳಿಗೆ ಸಂಬಂಧಿಸಿದಂಥ ಹಕ್ಕುಗಳ ಜೊತೆಗೆಯೇ ಮಾನವ ಹಕ್ಕುಗಳನ್ನು ಸಂರಕ್ಷಿಸಲಾಗಿರುತ್ತದೆ ಎಂಬುದನ್ನು ಗುರುತಿಸಬಹುದು.

**ಕನ್ಯೆಯರ ಮತ್ತು ಮಹಿಳೆಯರ ಅನ್ಯೆತಿಕ ಹೊಂದಲು ಹಣ ಬೇಕು ಆ ವ್ಯವಹಾರ ಪ್ರತಿಬಂಧಕ ಕಾಯಿದೆ**ಯನ್ನು 1956ರಲ್ಲಿ ಸಂಸತ್ತು ಅಂಗೀಕರಿಸುವ ಮೂಲಕ ವೇಶಾವೃತ್ತಿಯನ್ನು ನಿಷೇಧಿಸಿದೆ. ಇದನ್ನು ಮತ್ತೇ 1978 ಮತ್ತು 1986ರಲ್ಲಿ ತಿದ್ದುಪಡಿಗೆ ಒಳಪಡಿಸಿದ ಮೇಲೆ ಹೊಸದಾಗಿ ಈ ಮೇಲಿನ ನಾಮಾಂಕಿತವನ್ನು ನೀಡಲಾಗಿರುತ್ತದೆ. ಈ ವೇಶ್ಯಾವೃತ್ತಿಗೆಂದು ಮಕ್ಕಳನ್ನು ಕರೆತರುವ ವ್ಯಕ್ತಿಗಳಿಗೆ ಜೀವಾವಧಿ ಶಿಕ್ಷೆ ಅದೂ ಏಳುವರ್ಷ ಕನಿಷ್ಠ ಜೈಲುವಾಸ ವಿಧಿಸಲಾಗುವುದು. ಇವೇ ಅಲ್ಲದೇ ಭಾರತೀಯ ದಂಡಸಂಹಿತೆಯ ಪ್ರಕಾರ 18 ವರ್ಷಕ್ಕಿಂತ ಕಡಿಮೆ ಇರುವ ಹೆಣ್ಣು ಮಕ್ಕಳನ್ನು ಅನ್ಯೆತಿಕ ವ್ಯಾಪಾರಗಳಿಗೆ ಒಳಪಡಿಸುವುದಾಗಲೀ ಅಥವಾ ಮಾರಾಟ ಮಾಡುವುದಾಗಲೀ ಅಥವಾ ತಮ್ಮಲ್ಲಿಯೇ ಇಟ್ಟುಕೊಂಡರೇ ಅದು ಅಪರಾಧವಾಗುತ್ತದೆ ಎಂದು ಸೂಚಿಸಲಾಗಿರುತ್ತದೆ. ಮಹಿಳೆಯರು ಸುಖ ಜೀವನವನ್ನು ಹೊಂದಲು ಹಣ ಬೇಕು. ಆ ಹಣಕ್ಕಾಗಿ ತಮ್ಮ ದೇಹವನ್ನು ಮಾರಿಕೊಳ್ಳುವುದು ಈ ಹಣದ ಪೈಶಾಚಿಕ ಆಸೆಯಿಂದ ಅಮಾಯಿಕ ಬಡ ಮಹಿಳೆಯರನ್ನು ಒತ್ತಾಯಪೂರ್ವಕವಾಗಿ ವೇಶ್ಯಾವೃತ್ತಿಗೆ ನೂಕಲಾಗುವುದು. ಹಾಗೆಯೇ ಈ ಅಮಾಯಕ ಹೆಣ್ಣು ಮಕ್ಕಳನ್ನು ಅನ್ಯೆತಿಕ ವ್ಯವಹಾರಕ್ಕಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲಾಗುತ್ತದೆ. ಆದ್ದರಿಂದ ಇಂತಹ ವೈಜ್ಞಾನಿಕವಾಗಿ ಒಂದು ವ್ಯವಸ್ಥೆಯನ್ನು ಕಾನೂನಾತ್ಮಕವಾಗಿ ರದ್ದು ಮಾಡುವ ಸ್ಥಿತಿ ಒದಗಿ ಬಂದಿತು. ಆ ಕಾರಣವಾಗಿಯೇ ಈ ಕಾಯಿದೆಯು ಇಂತಹ ಅಮಾನವೀಯ ಕೃತ್ಯಗಳನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಹಣಗಳಿಸುವ ಉದ್ದೇಶದಿಂದ ಮಹಿಳೆಯರನ್ನು ಯಾವುದೇ ರೀತಿಯಲ್ಲಿ ಶೋಷಿಸುವುದು ದಂಡನೆಗೆ ಅರ್ಹವಾದ ಅಪರಾಧವೆಂದು ಘೋಷಿಸಲಾಯಿತು. ಇದಲ್ಲದೆ, ಅಂತಹ ಶೋಷಣೆಗೆ ಒಳಗಾದ ಮಹಿಳೆಯರನ್ನು

ರಕ್ಷಿಸಿ, ಅಗತ್ಯವಿದ್ದಲ್ಲಿ, ವೈದ್ಯಕೀಯ ಚಿಕಿತ್ಸೆ ನೀಡಿ ಅವರನ್ನು ಪುನರ್ ವಸತಿಗೊಳಸುವ ಸಲುವಾಗಿ ಸುಧಾರಣಾ ಸಂಸ್ಥೆಗಳಗೆ ಕಳುಹಿಸಿಕೊಡುವಂತಹ ಕೆಲಸ-ಕಾರ್ಯಗಳು ಪ್ರಸ್ತುತ ಏನಾದರೂ ಮಹಿಳೆಯರು ಹಾಗೂ ಬಾಲಕಿಯರು ಈ ಕೃತ್ಯಕ್ಕೆ ಗುರಿಯಾಗಿದ್ದರೆ ಅಂತಹವರಿಗೆ ಮಾನಸಿಕ ಸ್ಥೈರ್ಯನೀಡುವುದೇ ಆಗಿರುತ್ತದೆ.

1961ರ ಹೆರಿಗೆ ಸೌಲಭ್ಯ ಕಾಯಿದೆ ಬಹುಮುಖ್ಯವಾಗಿ ಅಧಿಕೃತ ಕ್ಷೇತ್ರಗಳಲ್ಲಿ ಅಂದರೆ, ಸರ್ಕಾರದಲ್ಲಿ ಕಾರ್ಖಾನೆ, ಗಣಿ, ಬ್ಯಾಂಕ್, ತೋಟಗಾರಿಕೆ ಇನ್ನೂ ಮುಂತಾದ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವಂತಹ ಮಹಿಳೆಯರಿಗೆ ಹೆರಿಗೆ ಪೂರ್ವ ಹಾಗೂ ಹೆರಿಗೆ ಅನಂತರ ಸಂಬಳ ಸಹಿತ ರಜೆಯನ್ನು ನೀಡಲು ಅವಕಾಶವನ್ನು ನೀಡಿರುತ್ತದೆ. ಅಂದರೆ, ಮಹಿಳೆಯರಿಗೆ ಈ ಸಂದರ್ಭದಲ್ಲಿ ರಜೆಗೂ ಇತರೆ ಸೌಲಭ್ಯಗಳನ್ನು ನೀಡಿ ಅವರನ್ನು ಕಾಪಾಡುವುದು ಸರ್ಕಾರದ ಕರ್ತವ್ಯ ಆಗಿರುತ್ತದೆ. ಹೆರಿಗೆ ಪ್ರಯೋಜನೆಯ ಕಾಯಿದೆ ಮತ್ತು ಮಕ್ಕಳ ಜನನದ ಮೊದಲು ಹಾಗೂ ಅನಂತರ ಕೆಲವು ಅವಧಿಗಳಲ್ಲಿ ಕೆಲವು ಸಂಸ್ಥೆಗಳಲ್ಲಿ ಮಹಿಳಾ ಉದ್ದಿಮೆಗಳ ಉದ್ಯೋಗವನ್ನು ನಿಯಂತ್ರಿಸುವ ಗುರಿಯನ್ನು ಹೊಂದಿದೆ. ಇದರಿಂದ ಮಾತೃತ್ವ ಮತ್ತು ಇತರ ಕೆಲವು ಪ್ರಯೋಜನೆಗಳನ್ನು ಮಹಿಳೆಯರಿಗೆ ಈ ಕಾಯಿದೆಯ ಒದಗಿಸುತ್ತದೆ. ಅವುಗಳೆಂದರೆ; ಈ ಹೆರಿಗೆ ಸೌಲಭ್ಯ ಕಾಯಿದೆಯು ಅಖಂಡ ಭಾರತಕ್ಕೆ ಅನ್ವಯ ಆಗುವಂತೆ ವಿಸ್ತರಿಸಲಾಗಿದೆ. ಪ್ರತಿ ಕಾರ್ಖಾನೆ, ಗಣಿ ಅಥವಾ ತೋಟ (ಸರ್ಕಾರಕ್ಕೆ ಸೇರಿದಂಥ ಪ್ರತಿಯೊಂದು ಸಂಸ್ಥೆಗಳು) ಉದ್ಯೋಗಿಗಳ ಸಂಖ್ಯೆಯನ್ನು ಲೆಕ್ಕಿಸದೇ ಕುದುರಿಸವಾರಿ, ಚಮತ್ಕಾರಿಕ ಮತ್ತು ಇತರ ಪ್ರದರ್ಶನಗಳ ಪ್ರಸಾರದಲ್ಲಿ ಬಳಸದೇ ಇರುವುದು. ಪ್ರತಿಯೊಬ್ಬ ಉದ್ಯೋಗದಲ್ಲಿರುವಂಥ ಉದ್ಯೋಗಸ್ಥರಿಗೆ ಹಿಂದಿನ 12 ತಿಂಗಳುಗಳು ಯಾವುದೇ ದಿನದಲ್ಲಿ 10 ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಉದ್ಯೋಗದಲ್ಲಿದ್ದರೆ ಅವರಿಗೆ ಕಾರ್ಖಾನೆಯಲ್ಲಿ ಅಂಗಡಿಯ ಸೌಲಭ್ಯವನ್ನು ಒದಗಿಸುವ ಜವಾಬ್ದಾರಿಯನ್ನು ಸಕಾರವು ಹೊತ್ತು ಸ್ಥಾಪನೆಮಾಡಬೇಕು. ಹಾಗೆಯೇ ರಾಜ್ಯಗಳು ಈ ಕಾಯಿದೆಯನ್ನು ಇತರೆ ಯಾವುದೇ ವರ್ಗಗಳಗೂ ವಿಸ್ತರಿಸುವ ಮುಖೇನ ಕೈಗಾರಿಕಾ, ವಾಣಿಜ್ಯ ಕೃಷಿ ಅಥವಾ ಇನ್ನಿತರ ಸಂಸ್ಥೆಗಳಗೆ ಇದನ್ನು ವಿಸ್ತರಿಸಬಹುದು ಎಂದು ಸೂಚಿಸಿರುತ್ತದೆ.

ಆದಾಗ್ಯೂ ಈ ಹೆರಿಗೆ ಸೌಲಭ್ಯ ಕಾಯಿದೆಯು ಇತರ ನೌಕರರ ರಾಜ್ಯ ವಿಮಾ ಕಾಯಿದೆಯ ನಿಬಂಧನೆಗಳು ಸಧ್ಯಕ್ಕೆ ಅನ್ವಯ ಆಗುವಂಥ ಯಾವುದೇ ಕಾಖಾನೆಯ ಸ್ಥಪನೆ ಈ ಕಾಯಿದೆಯು ಅನ್ವಯ ಆಗುವುದಿಲ್ಲ ಎಂದು ಪ್ರಸ್ತಾಪಿಸಲಾಗಿದೆ. ಆದರೆ, ಅಲ್ಲಿ ಕಾರ್ಖಾನೆ ಸ್ಥಾಪನೆ ಮಾಡಿ ನೌಕರರ ರಾಜ್ಯ ವಿಮಾ ಕಾಯಿದೆಯ ಅಡಿಯಲ್ಲಿ ನಿಯಂತ್ರಿಸಲಾಗುತ್ತದೆ. ಅಂದರೆ, ಮಹಿಳಾ ಉದ್ಯೋಗಿಗಳಗೆ ಈ ಕಾರ್ಖಾನೆ ಕಾಯಿದೆಯ 50ನೇ ವಿಧಿಯ ಅಡಿಯಲ್ಲಿ ಹೆರಿಗೆ ಸೌಲಭ್ಯವನ್ನು ಪಡೆಯಲು ಅರ್ಹತೆ ಇಲ್ಲ. ಏಕೆಂದರೆ ಆಕೆಗೆ ಪ್ರತಿತಿಂಗಳು 3,000 ರೂಪಾಯಿಯ ವೇತನವನ್ನು ಈ ಕಾಯಿದೆಯ ಅನ್ವಯ ಇಎಸ್ಐಯನ್ನು ನೀಡಲಾಗುತ್ತದೆ. ಹೀಗೆ ಈ ಹೆರಿಗೆ ಸೌಲಭ್ಯ ಕಾಯಿದೆಯ ಮುಖಾಂತರ ಮಹಿಳಾ

ಸಮುದಾಯವು ಉಪಯೋಗವನ್ನು ಪಡೆದುಕೊಂಡು ತಮ್ಮ ಮಾನವ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ.

ವರದಕ್ಷಿಣೆ ಪದ್ಧತಿಯು ಒಂದು ಸಾಮಾಜಿಕ ಪಿಡುಗಾಗಿ, ಸಮಾಜಕ್ಕೆ ಸವಾಲಾಗಿ ಕಾಣಿಸಿಕೊಳ್ಳತೊಡಗಿದೆ. "ವಧು ದಕ್ಷಿಣೆ – ವರದಕ್ಷಿಣೆಗಳನ್ನು ಕೊಡುವುದು ಅಥವಾ ತೆಗೆದುಕೊಳ್ಳುವುದು ಕೂಡ ಒಂದು ಅಪರಾಧ. ಇದನ್ನು ನಿಷೇಧಿಸುವ ಸಲುವಾಗಿ 1961ರಲ್ಲಿ ಒಂದು ಕಾಯಿದೆಯನ್ನು ಜಾರಿಗೆ ತರಲಾಗಿದೆ. ಅದೇ ವರದಕ್ಷಿಣೆ ನಿಷೇಧ ಕಾಯಿದೆ–1961 ಆಗಿರುತ್ತದೆ. ಇದರ ಪ್ರಕಾರವಾಗಿ ವರದಕ್ಷಿಣೆಯನ್ನು ತೆಗೆದುಕೊಳ್ಳುವುದು ಕೂಡ ಅಪರಾಧ ವಾಗುತ್ತದೆ. ಈ ಕಾಯಿದೆಯೂ ಅನುಷ್ಠಾನದಲ್ಲಿ ಇದ್ದರೂ ಕೂಡ ವರದಕ್ಷಿಣೆಯ ಪಿಡುಗು ನಿಲ್ಲದೇ ಇದ್ದಾಗ, ಸಂಸತ್ತು 1984 ಹಾಗೂ 1986ರಲ್ಲಿ ಕಾಯಿದೆಯನ್ನು ತಿದ್ದುಪಡಿಯನ್ನು ಮಾಡಿ ಭಾರತೀಯ ದಂಡ ಸಂಹಿತೆ 304ಬಿ ಪ್ರಕಾರ ಅಪರಾಧವಾಗುತ್ತದೆ. ಹಾಗಾಗಿ ಈ ಶಾಸನವನ್ನು ಉಲ್ಲಂಘಿಸಿದವರಿಗೆ ಕನಿಷ್ಟ 7 ವರ್ಷ ಕಠಿಣ ಸೆರೆಮನೆ ವಾಸ ಶಿಕ್ಷೆಯನ್ನು ವಿಧಿಸಿತು. ಈ ಸಂಬಂಧವಾದ ಅಪರಾಧಗಳನ್ನು **ಜಾಮೀನು ರಹಿತ** ಅಪರಾಧಗಳೆಂದು ಘೋಷಿಸಲಾಗಿರುತ್ತದೆ. ಆದ್ದರಿಂದ ವಧೂದಕ್ಷಿಣೆ – ವರದಕ್ಷಿಣೆ ನಿಷೇಧ ಕಾಯಿದೆಯ ಅನುಷ್ಠಾನವೂ ವದುದಕ್ಷಿಣೆ ಅಥವಾ ವರದಕ್ಷಿಣೆ ನೀಡುವುದನ್ನು ಇದು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿದರಿಂದ ಮಾತ್ರವಲ್ಲ. ಇಲ್ಲಿನ ಸಮಾಜವೂ ಕೂಡ ಅದನ್ನು ನಿಯಂತ್ರಿಸಬೇಕು. ಸಮಾಜವು ಸದರಿ ಪಿಡುಗನ್ನು ನಿಯಂತ್ರಿಸಲು ಮತ್ತು ಹೋರಾಡಲು ಮಾರ್ಗೋಪಾಯಗಳನ್ನು ಕಂಡುಹಿಡಿಯಬೇಕು. ವರದಕ್ಷಿಣೆ ಎಂಬ ಭೂತ ತನ್ನ ಪತಿಯ ಮನೆಯಲ್ಲಿ ಸುಖದ ಕನಸ್ಸನ್ನು ಕಾಣುವ ಅನೇಕ ಮದುವೆಯಾದಂತಹ ಯುವತಿಯರನ್ನು ದಿನನಿತ್ಯ ಕಾಡುತ್ತಿದೆ. ಕೆಲವೇ ಕೆಲವು ಮೊಕದ್ದೊಮೆಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿದೆ. ಅದೇ ತರಹದ ಕ್ರೌರ್ಯ ಅಥವಾ ಹಿಂಸೆಯನ್ನು ಅನುಭವಿಸಿರಬಹುದಾದ ಅತ್ತೆಯರು ನಾದಿನಿಯರ ಮೇಲೆ ಇದು ನಿಗ್ರಹಾಣತ್ಮಕ ಪರಿಣಾಮ ಹೊಂದಿಲ್ಲ. ಹೀಗೆ ಆಳವಾಗಿ ಬೇರೂರಿದ ಸಾಮಾಜಿಕ ಪಿಡುಗನ್ನು ವರದಕ್ಷಿಣೆ ನಿಷೇಧ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದು ರಾಷ್ಟ್ರದಿಂದಲೇ ಅಲ್ಲ ಸಮಾಜದ ಸದರಿ ದುಷ್ಟ ವ್ಯವಸ್ಥೆಯನ್ನು ನಿಯಂತ್ರಿಸಲು ಮತ್ತು ಹೋರಾಡಲು ಮಾಗೋಪಾಯವನ್ನು ಕಂಡುಹಿಡಿಯಬೇಕು. ಒಂದಲ್ಲ ಒಂದು ರೀತಿಯಲ್ಲಿ ವರದಕ್ಷಿಣೆಯನ್ನು ಸ್ವೀಕರಿಸುವ ಪ್ರವೃತ್ತಿ ಇಂದಿನ ವಿದ್ಯಾವಂತ ವರ್ಗದಲ್ಲಿಯೇ ಹೆಚ್ಚಾಗುತ್ತಿದೆ. ಆದ್ದರಿಂದ ಕೆಲವೇ ಕೆಲವು ವ್ಯಕ್ತಿಗಳ ಹತ್ತಿರ ಲೆಕ್ಕವಿಲ್ಲದಷ್ಟು ಸಂಪತ್ತು ಸಂಗ್ರಹವಾಗಿರುತ್ತದೆ. ಆದರೆ ಅಷ್ಟೊಂದು ಅನುಕೂಲಸ್ಥರಲ್ಲದ ಇತರರು ಅನಿವಾರ್ಯವಾಗಿ ಅವರು ಕೂಡ ಇವರ ಹಾದಿಯಲ್ಲಿಯೇ ಸಾಗಿ ಸಾಲವಂತರಾಗಿ ಕೊನೆಗೆ ಆತ್ಮಹತ್ಯೆಮಾಡಿಕೊಳ್ಳುವುದೇ ಇವರಿಗೆ ಉಳಿದಿರುವ ಏಕೈಕ ಮಾರ್ಗವಾಗಿರುತ್ತದೆ.

ಭಾರತದ ಸಂಸತ್ತು ಪುರುಷರು ಮತ್ತು ಮಹಿಳೆಯರು ಒಂದೇ. ಅವರಿಗೆ ಒಂದೇ ರೀತಿಯಾದಂತಹ ವೇತನವನ್ನು ಕೊಡುವ ನಿಟ್ಟಿನಲ್ಲಿ 1976ರಲ್ಲಿ ಈ ಕಾಯ್ದೆಯನ್ನು ಅಂಗೀಕರಿಸುತ್ತದೆ. ಈ ಮೂಲಕ ಮಹಿಳೆಯರ ಶೋಷಣೆಯನ್ನು ತಡೆಯಲು ಪೂರಕವಾಗಿದೆ. ಆ ನಿಟ್ಟಿನಲ್ಲಿ ಪುರುಷ ಮತ್ತು ಮಹಿಳೆಯರೆಂಬ ಬೇಧಭಾವವನ್ನು ಹಾಗೂ ತಾರತಮ್ಯವನ್ನು ನಿಷೇಧಿಸಿ, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕಡ್ಡಾಯವಾಗಿ ನೀಡುವಂತೆ ಆದೇಶಿಸಿರುತ್ತದೆ. ಕಾರ್ಮಿಕ ಸ್ಥಳಗಳಲ್ಲಿ ಮಹಿಳಾ ಕೆಲಸಗಾರರ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ. ಇದರ ಅನ್ಯಾಯ ಒಂದೇ ರೀತಿಯ ಕೆಲಸಕ್ಕೆ ಮಹಿಳೆ ಮತ್ತು ಪುರುಷ ಕಾರ್ಮಿಕರಿಗೆ ಸಮಾನ ವೇತನ ಕೊಡಬೇಕೆಂದು ಹೇಳಬಹುದು.

**1976ರ ಕಾರ್ಖಾನೆಗಳ (ತಿದ್ದುಪಡಿ) ಕಾಯಿದೆ** ಈ ಕಾಯಿದೆಯು ಪ್ರಕಾರ 30 ಜನ ಮಹಿಳೆಯರು ಒಂದೇ ಕಡೆ ಕೆಲಸವನ್ನು ಮಾಡುತ್ತಿದ್ದರೆ, ಅವರುಗಳ ಎಳೆಯ ಮಕ್ಕಳ ಶುಶ್ರೂಷೆಗಾಗಿ ಶಿಶುಸಂರಕ್ಷಣಾ ವ್ಯವಸ್ಥೆಯನ್ನು ಸರ್ಕಾರ ಅಥವಾ ಮಾಲೀಕನು ಮಾಡಿಕೊಡಬೇಕು ಎಂಬ ನೀತಿಯನ್ನು ಜಾರಿಗೆ ತರಲಾಗಿದೆ. ಅಂದರೆ ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಅವರಿಗೆ ಭದ್ರತೆಯನ್ನು ಈ ಮೂಲಕ ಒದಗಿಸಬೇಕು.

**ಮಹಿಳೆಯರ ಅಸಭ್ಯ ಪ್ರತಿನಿಧಿಸುವಿಕೆಯ ನಿಷೇಧ** ಕಾಯಿದೆಯು 1986ರಲ್ಲಿ ಜಾರಿಗೆ ಬಂದು ಮಾಧ್ಯಮ ಟಿ.ವಿ., ರೇಡಿಯೋ, ಪತ್ರಿಕೆಗಳು, ಜಾಹಿರಾತುಗಳು, ಪುಸ್ತಕಗಳು, ಕೆಲಸದ ಸ್ಥಳಗಳಲ್ಲಿ ಮಹಿಳೆಯನ್ನು ಅಶ್ಲೀಲವಾಗಿ ಪ್ರದರ್ಶಿಸುವುದನ್ನು ನಿಷೇಧಿಸಲಾಗಿರುತ್ತದೆ. ಭಾರತೀಯ ಅಸಮಾನತೆಯ ಹಾಗೂ ಕ್ರೌರ್ಯಕಾಮುಕ ಮನಸ್ಸುಗಳು ಸನಾತನ ಕಾಲದಿಂದಲೂ ಮಹಿಳೆಯರನ್ನು ಅಸಂಖ್ಯ ಹಾಗೂ ಭೋಗದ ವಸ್ತುವಾಗಿಯೇ ಬಳಸಿದ್ದಾರೆ. ಅದು ಭಾರತದಾದ್ಯಂತ ಇರುವ ಚಿತ್ರಪಟಗಳು, ದೇವಾಲಯ, ಗುಹೆಗಳು, ರಥ-ತೇರೆಗಳಲ್ಲಿ ಇರುವ ಕೆತ್ತನೆಯ ಚಿತ್ರಗಳು ಮಹಿಳೆಯರ ಅಸಭ್ಯ ಹಾಗೂ ಅಶ್ಲಿಲತೆಗೆ ಕಾರಣವಾಗಿದೆ. ಇದನ್ನು ತಡೆಗಟ್ಟಲು ಪ್ರಯತ್ನಿಸಿದಾಗ, ಇದನ್ನು ದೇವರ ಹೆಸರಿನಲ್ಲಿ, ಧರ್ಮದ ಹೆಸರಿಗೆ ಅಪಮಾನ ಮಾಡಿದಂತೆ ಎಂದು ಭಾವಿಸುವ ಜನವರ್ಗ ಕೂಡ ಇದೆ.

**1829ರ ಸತಿ ನಿಷೇಧ ಕಾಯಿದೆಯು** 1987ರಲ್ಲಿ ಈ ಕಾಯಿದೆಯು ಪತಿಯು ಸತ್ತ ಅನಂತರ ಈತನ ಸತಿಯು ವಿಧವೆಯಾಗುತ್ತಾಳೆ. ತದನಂತರದಲ್ಲಿ ಜೀವ ಸಹಿತ ಚಿತೆಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಿದ್ದಂತಹ ಅಮಾನುಷವಾದ ಪದ್ಧತಿಯನ್ನು ನಿಷೇಧಿಸಲಾಗಿದೆ. ಆದರೆ, ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ರೂಢಿಯಲ್ಲಿರುವ ಈ ಸತಿ ಪದ್ದತಿಯನ್ನು ಅಕ್ರಮ ಮತ್ತು ಅಮಾನುಷವೆಂದು ಸಾರಲು ಕೇಂದ್ರ ಮತ್ತು ರಾಜಸ್ತಾನದ ಸರ್ಕಾರಗಳು ಕಾನೂನುಗಳನ್ನು ಜಾರಿಗೆ ತಂದಿವೆ. "1987ರಲ್ಲಿ ಸೆಪ್ಟೆಂಬರ್ 4ರಂದು 18 ವರ್ಷದ ವಯಸ್ಸಿನ ರೂಪ ಕ್ವನ್ವರ್ ರಾಜಸ್ತಾನದ ಸಿತಾರ ಜಿಲ್ಲೆಯಲ್ಲಿ ದಿಯೋಲಾಲಾ ಗ್ರಾಮದಲ್ಲಿ ಸತಿಸಹಗಮನ ಮಾಡಿದ್ದು, ಇಡೀ ದೇಶದಲ್ಲಿಯೇ ಸಾಮಾಜಿಕ ಕ್ರಾಂತಿಯನ್ನೇ ಉಂಟುಮಾಡಿತು. ಈ ಘಟನೆ ನಡೆದ ಕೆಲವೇ ದಿನಗಳ ನಂತರ ರಾಜಸ್ತಾನ ಸರ್ಕಾರವು

ಈ ಸತಿ ತಡೆಗೆ ಸುಗ್ರಿವಾಜ್ಞೆಯನ್ನು ಘೋಷಿಸಿತು. ಸತಿ ಪದ್ಧತಿಯನ್ನು ಪ್ರೇರೆಪಿಸುವವರಿಗೆ ಮರಣ ದಂಡನೆ ಹಾಗೂ ಸತಿಸಹಗಮನ ಮಾಡಲು ಪ್ರಯತ್ನಿಸಿದವರಿಗೆ ಮತ್ತು ಸತಿಪದ್ಧತಿಯನ್ನು ವೈಭವಿಕರಿಸಿಸುವವರಿಗೆ ಕಠಿಣ ಶಿಕ್ಷೆಯನ್ನು ನೀಡಲು ಈ ಆಜ್ಞೆಯಲ್ಲಿ ಸೂಚಿಸಿದೆ. "ಕೇಂದ್ರದ ಸಂಸತ್ತು ಕೂಡ 1957ರ ಡಿಸೆಂಬರ್‌ನಲ್ಲಿ ಈ ಮಸೂದೆಯನ್ನು ಅಂಗೀಕರಿಸಿ, ಸತಿಪದ್ಧತಿಯ ನಿಷೇಧಕ್ಕೆ ಕಠಿಣ ಕ್ರಮ ಕೈಗೊಂಡಿತು." ಸತಿಪದ್ಧತಿಯನ್ನು ಪ್ರೇರೇಪಿಸುವವರಿಗೆ ಮರಣದಂಡನೆಗೆ ಅಥವಾ ಜೀವಾವಧಿಶಿಕ್ಷೆ ಮತ್ತು ಜುಲ್ಮಾನೆ ವಿಧಿಸಲು ಅವಕಾಶವಿದೆ.

ಭಾರತದ ಸಂಸತ್ತು ದೇಶದಲ್ಲಿನ ಹಲವು-ಹತ್ತು ಸಮಸ್ಯೆಗಳನ್ನು ಸಂವಿಧಾನದ ಚೌಕಟ್ಟಿನಲ್ಲಿ ಬಗೆಹರಿಸಿರುತ್ತದೆ ಎಂಬುದನ್ನು ಅಧ್ಯಯನದ ಮೂಲಕ ಗುರುತಿಸಬಹುದು. ಅದನ್ನು ಸಾಕ್ಷೀಕರಿಸಲೂಬಹುದು. ಸಂವಿಧಾನದ ವಿಧಿ-ವಿಧಾನಗಳಿಗೆ ಅನುಗುಣವಾಗಿ ಮಾನವ ಹಕ್ಕುಗಳ ಉಲ್ಲಂಘನೆ ಅದಾಗ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಹಾಗೂ ನಿರ್ದೇಶನದ ಮೇಲೆ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರೂಪಿಸಿ ಜಾರಿಗೆ ತಂದಿರುತ್ತದೆ. ಹಾಗೆಯೇ ವಿವಿಧ ಕ್ಷೇತ್ರಗಳಲ್ಲಿ ಹೊಸ ಹೊಸ ಹಾಗೂ ಮುಂಬರುವಂಥ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಶಾಸಕಾಂಗವು ಸಾಕಷ್ಟು ಪ್ರಚೋದನೆಯನ್ನು ಪ್ರತಿ ದಿನವೂ ಕೂಡ ಈ ಮುಖೇನವಾಗಿಯೇ ನೀಡುತ್ತಾ ಬಂದಿರುತ್ತವೆ.

ಸ್ವತಂತ್ರ್ಯ ಭಾರತದ ಸಂಸತ್ತು ತನ್ನ ರಾಷ್ಟ್ರದಲ್ಲಿನ ಜನಸಾಮಾನ್ಯರನ್ನು ಹಕ್ಕುಗಳನ್ನು ರಕ್ಷಿಸುವಲ್ಲಿ ಒಂದು ಪ್ರಮುಖವಾದಂಥ ಮಾನ್ಯತೆ ಹಾಗೂ ಸ್ಥಾನವನ್ನೂ ಕೂಡ ಹೊಂದಿರುತ್ತದೆ. ಹಾಗೆಯೇ ಮಾನವ ಹಕ್ಕುಗಳ ಉಲ್ಲಂಘಟನೆಗೆ ಅನುಗುಣವಾದ ಶಾಶನಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಸಾಮಾರ್ಥ್ಯವನ್ನು ಕೂಡ ಬಲಗೊಳಸುತ್ತದೆ. ಮತ್ತೇ ನಿರ್ದಿಷ್ಟ ಶಾಸನಗಳ ಮೂಲಕ ಮಾನವ ಹಕ್ಕುಗಳ ಉಲ್ಲಂಘನೆಯ ಗುರುತಿಸಿ ತಡೆಗಟ್ಟುವುದು ಹಾಗೂ ಅವುಗಳನ್ನು ಈವರೆಗೆ ಬಹಿರಂಗಪಡಿಸಿರುವ ಏಕೈಕ ಪ್ರದೇಶ ಇದಾಗಿರುತ್ತದೆ. ಈ ಮೂಲಕವಾಗಿಯೇ ಇಂಥ ಅನೇಕ ಮಸೂದೆಗಳು ಹಾಗೂ ಕಾಯಿದೆಗಳ ಪರಿಚಯದೊಂದಿಗೆ ಸಂಸತ್ತು ಮಾನವ ಹಕ್ಕುಗಳ ಉಲ್ಲಂಘನೆಯನ್ನು ಪಡೆಯುತ್ತಿದೆ.

1994ರ ಭ್ರೂಣ ಲಿಂಗ ಪತ್ತೆ ನಿಷೇಧ ಕಾಯಿದೆ, ಇದು ಗರ್ಭಧಾರಣೆಯ ಮೊದಲು ಅಥವಾ ಅನಂತರ ಲೈಂಗಿಕ ಆಯ್ಕೆಯನ್ನು ನಿಷೇದಿಸಲು ಮತ್ತು ಅನುವಂಶಿಕ ವೈಪರೀತ್ಯಗಳು ಅಥವಾ ಜಯಾಪಜಯ ಅಸ್ವಸ್ಥೆಗಳು ಅಥವಾ ವರ್ಣ ತಂತು ವೈಪರೀತ್ಯಗಳು ಅಥವಾ ಕೆಲವು ಜನ್ಮಜಾತ ವಿರೂಪಗಳು ಅಥವಾ ಲೈಂಗಿಕ ಸಂಬಂಧಿತ ಅಸ್ವಸ್ಥತೆಗಳನ್ನು ಪತ್ತೆ ಹಚ್ಚುವ ಉದ್ದೇಶಕ್ಕಾಗಿ ಮತ್ತು ಪ್ರವಸಪೂರ್ವ ರೋಗನಿರ್ಣಯ ತಂತ್ರಗಳ ನಿಯಂತ್ರಣಕ್ಕಾಗಿ ಒದಗಿಸುವಂಥ ಕಾಯಿದೆ ಇದಾಗಿದೆ. ಇದು ಸ್ತ್ರೀ ಭ್ರೂಸಾಹಿತ್ಯದ ಕಾರಣವಾಗುವ ಲೈಂಗಿಕ ನಿರ್ಣಯಕ್ಕಾಗಿ ಅವರ ದುರುಪಯೋಗ ಮತ್ತು ಅದರೊಂದಿಗೆ ಸಂಪರ್ಕ ಹೊಂದಿದ ಅಥವಾ ಪ್ರಾಸಂಗಿಕ ವಿಷಯಗಳಿಗಾಗಿ ಈ ಕಾಯಿದೆಯನ್ನು

ಜಾರಿಗೆ ತರಲಾಗಿದೆ. ಈ ಕಾಯಿದೆಗೆ 2003ರಲ್ಲಿ ತಿದ್ದುಪಡಿಯನ್ನು ತರುವ ಮೂಲಕ ಇದನ್ನು ಪೂರ್ವ ಪರಿಕಲ್ಪನೆ ಮತ್ತು ಪೂರ್ವ ನಟಲ್ ಡಯಾಗ್ನೋಸ್ಟಿಕ್ ತಂತ್ರಗಳು (ಲೈಂಗಿಕ ಆಯ್ಕೆ ನಿಷೇಧ) ಕಾಯಿದೆ – 2003 ಎಂದು ಜಾರಿಗೆ ಬಂದಿರುತ್ತದೆ. 1994ರ ಭ್ರೂಣ ಲಿಂಗ ಪತ್ತೆ ನಿಷೇಧ ಕಾಯಿದೆ–1994 ಎಂಬುದು ಭಾರತದ ಸಂಸತ್ತಿನಿಂದ ಒಪ್ಪಿಗೆ ಪಡೆದಿರುವಂಥ ಒಂದು ಕಾಯಿದೆಯಾಗಿದ್ದು, ಅದು ಸ್ತ್ರೀ ಶಿಶುಹತ್ಯೆಯನ್ನು ತಡೆಯಲು ಮತ್ತು ಭಾರತದಲ್ಲಿ ಕ್ಷೀಣೀಸುತ್ತಿರುವ ಲಿಂಗಶಿಶುಪಾತವನ್ನು ಬಂಧಿಸಲು ಇದನ್ನು ಜಾರಿಗೆ ತರಲಾಗಿದೆ. ಈ ಕೃತ್ಯವು ಪ್ರಸವಪೂರ್ವ ಲೈಂಗಿಕ ನಿರ್ಣಯವನ್ನು ನಿಷೇಧಿಸಿತು. ಭಾರತದಲ್ಲಿ ಈ ಕಾಯಿದೆಯು ಜಾರಿಗೆ ಬರಲು ಪ್ರಮುಖ ಕಾರಣವೆಂದರೆ; ಭಾರತದಲ್ಲಿ ಹೆಣ್ಣು ಭ್ರೂಣ ಹತ್ಯೆಯು ಲೆಕ್ಕವಿಲ್ಲದಷ್ಟು ನಡೆಯುತ್ತಿತ್ತು. ಅದನ್ನು ಗುರುತಿಸುವುದಾದರೆ; 1990ರ ದಶಕದ ಆರಂಭದಲ್ಲಿ ಅಲ್ಟ್ರಾಸೌಂಡ್ ತಂತ್ರಗಳು ಭಾರತದಲ್ಲಿ ವ್ಯಾಪಕವಾಗಿ ಬಳಕೆಯನ್ನು ಪಡೆದಾಗ ಈ ಪ್ರಕ್ರಿಯೆಯು ಪ್ರಾರಂಭವಾಯಿತು. ಗಂಡು ಮಗು ಜನಿಸುವವರೆಗೂ ಕುಟುಂಬಗಳು ನಿರಂತರ ಮಕ್ಕಳನ್ನು ಉತ್ಪಾದಿಸುವ ಪ್ರವೃತ್ತಿ ಇತ್ತು. ಭ್ರೂಣದ ಲಿಂಗ ನಿರ್ಣಯ ಮತ್ತು ವೈದ್ಯಕೀಯ ವೃತ್ತಿಪರದಿಂದ ಲೈಂಗಿಕ ಆಯ್ದ ಗರ್ಭಪಾತವು ಒಂದು ಸಾವಿರ ಕೋಟಿ ರೂ ಉದ್ಯಮವೇ ಆಗಿತ್ತು. ಮಹಿಳೆಯರ ಮೇಲಿನ ಸಾಮಾಜಿಕ ತಾರತಮ್ಯವು ಮತ್ತು ಗಂಡು ಮಕ್ಕಳ ವ್ಯಾಮೋಹ ಆಧ್ಯತೆಯು ಮಹಿಳೆಯರ ಭ್ರೂಣ ಹತ್ಯೆಯನ್ನು ವಿವಿಧ ರೂಪಗಳಲ್ಲಿ ಉತ್ತೇಜಿಸಿರುತ್ತದೆ. ಇದು ದೇಶದ ಲಿಂಗ ಅನುಪಾತವನ್ನು ಪುರುಷರ ಕಡೆಗೆ ತಿರುಗಿಸುತ್ತದೆ. ಭಾರತೀಯ ಜನಗಣತಿಯ ಪ್ರಕಾರ; ಭಾರತದಲ್ಲಿ 0–6 ವಯೋಮಾನದವರಲ್ಲಿ ಲಿಂಗ ಅನುಪಾತವು 1981ರಲ್ಲಿ 100 ಮಹಿಳೆಯರಿಗೆ 104.0 ಪುರುಷ ರಿಂದ 1991ರಲ್ಲಿ 105.8ಕ್ಕೆ 2001ರಲ್ಲಿ 10.8ಕ್ಕೆ 2011ರಲ್ಲಿ 109.4ಕ್ಕೆ ಏರಿರುತ್ತದೆ. ಈ ಅನುಪಾತವು ಗಮನಾರ್ಹವಾಗಿ ಹೆಚ್ಚಾಗಿದೆ. ಕೆಲವು ರಾಜ್ಯಗಳಾದ ಪಂಜಾಬ್ ಮತ್ತು ಹರಿಯಾಣಗಳಲ್ಲಿ 2001ರಂತೆ 121.1 ಮತ್ತು 122.0.

**ಭ್ರೂಣ ಲಿಂಗ ಪತ್ತೆ ನಿಷೇಧ** ಕಾಯಿದೆಯನ್ನು ಜಾರಿಗೆ ತರುವ ಮುಖ್ಯ ಉದ್ದೇಶವೆನೆಂದರೆ; ಗರ್ಭಧಾರಣೆಯ ಮೊದಲು ಅಥವಾ ಅನಂತರ ಲೈಂಗಿಕ ಆಯ್ಕೆ ತಂತ್ರಗಳ ಬಳಕೆಯನ್ನು ನಿಷೇಧಿಸುವುದು ಮತ್ತು ಲೈಂಗಿಕ ಆಯ್ಕೆ ಗರ್ಭಪಾತಕ್ಕೆ ಪ್ರಸವಪೂರ್ವ ರೋಗನಿರ್ಣಯ ತಂತ್ರದ ದುರುಪಯೋಗವನ್ನು ತಡೆಯುವುದು. ಲೈಂಗಿಕ ಆಯ್ಕೆಯು ಭ್ರೂನದ ಲಿಂಗವನ್ನು ಗುರುತಿಸುವ ಮತ್ತು ಭ್ರೂಣವನ್ನು ಅನಗತ್ಯ ಲೈಂಗಿಕತೆಯಾಗಿದ್ದರೆ ಅದನ್ನು ತೆಗೆದು ಹಾಕುವ ಯಾವುದೇ ಕ್ರಿಯೆಯಾಗಿದೆ.

**ಭ್ರೂಣ ಲಿಂಗ ಪತ್ತೆಯ ಪ್ರಮುಖ ಲಕ್ಷಣಗಳೆಂದರೆ;** ನೋಂದಾಯಿತರ ಘಟಕಗಳಲ್ಲಿ ಪ್ರಸವಪೂರ್ವ ರೋಗನಿರ್ಣಯ ತಂತ್ರವನ್ನು ನಡೆಸುವುದು ಅಥವಾ ಸಹಾಯ ಮಾಡುವುದು. ಪುರುಷ ಅಥವಾ ಮಹಿಳೆಯ ಮೇಲೆ ಲೈಂಗಿಕ ಆಯ್ಕೆ, ಮಾರಾಟ ವಿತರಣೆಯಲ್ಲಿ ಕಾಯಿದೆಯಲ್ಲ ಉಲ್ಲೇಖಿಸಲಾಗಿರುವ ಯಾವುದೇ ಉದ್ದೇಸಕ್ಕಾಗಿ ಪಿಎಡಿ ಪರೀಕ್ಷೆಯನ್ನು ನಡೆಯುವುದು. ಈ ಕಾಯಿದೆಯ ಅಪರಾಧಗಳಲ್ಲಿ

ಸೇರಿವೆ. ಯಾವುದೇ ಅಲ್ಟ್ರಾಸೌಂಡ್ ಯಂತ್ರ ಅಥವಾ ಭ್ರೂಣದ ಲೈಂಗಿಕತೆಯನ್ನು ಪತ್ತೆ ಹಚ್ಚುವ ಸಾಮರ್ಥ್ಯವಿರುವ ಆವುದೇ ಉಪಕರಣಗಳ ಪೂರೈಕೆ, ಬಾಡಿಗೆ ಇತ್ಯಾದಿಗಳು ಕೂಡ ಈ ಕಾಯಿದೆಯ ಉಖ್ಯ ನಿಬಂಧನೆಗಳಲ್ಲಿ ಸೇರಿಕೊಂಡಿರುತ್ತವೆ. ಅವುಗಳೆಂದರೆ; ಗರ್ಭಧಾರಣೆಯ ಮೊದಲು ಅಥವಾ ಅನಂತರ ಲೈಂಗಿಕ ಆಯ್ಕೆಯನ್ನು ನಿಷೇಧಿಸಲು ಈ ಕಾಯಿದೆಯು ಅವಕಾಶ ನೀಡುತ್ತದೆ. ಅಲ್ಟ್ರಾ ಸೌಂಡ್ ಮತ್ತು ಆಮ್ನಿಯೋಸೆಂಟೀಸ್‌ನಂಥ ಪ್ರವಸಪೂರ್ವ ರೋಗನಿರ್ಣಯ ತಂತ್ರಗಳ ಬಳೆಯನ್ನು ಇದು ನಿಯಂತ್ರಿಸುತ್ತದೆ. ಅದರಲ್ಲಿ; ಅನುವಂಶಿಕ ವೈಪರೀತ್ಯಗಳು, ಚಯಾಪಚಯ ಅಸ್ವಸ್ಥಗಳು, ವರ್ಣತಂತು ಅಸಹಜತೆಗಳು, ಕೆಲವು ಜನ್ಮಜಾತ ವಿರೂಪಗಳು, ಹಿಮೋಗ್ಲೋಬಿನೋಪತಿ, ಲೈಂಗಿಕ ಸಂಬಂಧಿತ ಅಸ್ವಸ್ಥತೆಗಳು.

ಭ್ರೂಣ, ಲೈಂಗಿಕತೆಯನ್ನು ನಿರ್ಧರಿಸುವ ಉದ್ದೇಶದಿಂದ ಯಾವುದೇ ಪ್ರಯೋಗಾಲಯ ಅಥವಾ ಕೇಂದ್ರ ಅಥವಾ ಕ್ಲಿನಿಕ್ ಅಲ್ಟ್ರಾಸೊನೋಗ್ರಫಿ ಸೇರಿದಂತೆ ಯಾವುದೇ ಪರೀಕ್ಷೆಯನ್ನು ನಡೆಸುವುದಿಲ್ಲ. ಕಾನೂನಿನ ಪ್ರಕಾರ ಕಾರ್ಯವಿಧಾನವನ್ನು ನಡೆಸುತ್ತಿರುವವರು ಸೇರಿದಂತೆ ಯಾವುದೇ ವ್ಯಕ್ತಿ, ಭ್ರೂಣದ ಲೈಂಗಿಕತೆಯನ್ನು ಗರ್ಭಿಣಿ ಮಹಿಳೆ ಅಥವಾ ಆಕೆಯ ಸಂಬಂಧಿಕರಿಗೆ ಮಾತುಗಳು, ಚಿಹ್ನೆಗಳು ಅಥವಾ ಬೇರೆ ಯಾವುದೇ ವಿಧಾನದ ಮೂಲಕ ತಿಳಸುವುದಿಲ್ಲ. ಯಾವುದೇ ವ್ಯಕ್ತಿಯು ಸೂಚನೆ, ವೃತ್ತಾಕಾರ, ಲೇಬಲ್, ಹೊದಿಕೆ ಅಥವಾ ಯಾವುದೇ ದಾಖಲೆಯ ರೂಪದಲ್ಲಿ ಪೂರ್ವಪ್ರಸವ ಮತ್ತು ಗರ್ಭಧಾರಣೆಯ ಪೂರ್ವ ನಿರ್ಣಯದ ಸೌಲಭ್ಯಗಳಿಗಾಗಿ ಜಾಹೀರಾತುಗಳನ್ನು ಹಾಕುತ್ತಾನೆ ಅಥವಾ ಆಂತರಿಕ ಅಥವಾ ಇತರ ಮಾಧ್ಯಮಗಳ ಮೂಲಕ ವಿದ್ಯುನ್ಮಾನ ಅಥವಾ ಮುದ್ರಣ ರೂಪದಲ್ಲಿ ಜಾಹೀರಾತು ನೀಡುತ್ತಾನೆ. ಅಥವಾ ತೊಡಗಿಸಿಕೊಳ್ಳುತ್ತಾನೋ ಹೋರ್ಡಿಂಗ್, ಗೋಡೆ ಬರಹ, ದಾರಿದೀಪಗಳು, ಧ್ವನಿವರ್ಧಕ ಹೊಗೆ ಅಥವಾ ಅನಿಲದ ಮೂಲಕ ಮಾಡಿದ ಯಾವುದೇ ಗೋಚರ ಪ್ರಾತಿನಿಧ್ಯವನ್ನು ನಿಷೇದಿಸಿದೆ. ಇದು ಕಂಡುಬಂದಲ್ಲಿ ಅಂಥವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 10,000ರೂಗಳ ಜುಲ್ಮಾನೆಯನ್ನು ಹಾಕಲಾಗುವುದು ಎಂದು ಕಾಯಿದೆಯಲ್ಲಿ ಸೂಚಿಸಿರುತ್ತದೆ. ಇದಕ್ಕೆ ಮತ್ತೇ ಕೇಂದ್ರ ಸರ್ಕಾರ 2003ರಲ್ಲಿ ತಿದ್ದುಪಡಿ ಮಾಡಿ ಭ್ರೂಣಲಿಂಗ ಪತ್ತೆ ಹಚ್ಚುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇದರ ಉಲ್ಲಂಘಿಸಿದರೆ 50,000ರೂ ದಂಡ ವಿಧಿಸಲು ಕೇಂದ್ರ ಸರ್ಕಾರವು 2011ರಲ್ಲಿ ಅಕ್ಟೋಬರ್‌ನಲ್ಲಿ ತಿದ್ದುಪಡಿಯನ್ನು ತರಲಾಗಿದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿಯೂ ಹಿಂದಿನಂತೆಯೇ ಗಂಡು ಮಕ್ಕಳ ವ್ಯಾಮೋಹ ಹೆಚ್ಚಾಗಿರುವ ಪರಿಣಾಮ ಮೊಳಕೆಯಲ್ಲಿಯೇ ಚಿವುಟುವ ಪ್ರಕ್ರಿಯೆಗಳು ನಡೆಯುತ್ತಿದ್ದವು. ಅಂದರೆ ಮಹಿಳೆಯರು ಗರ್ಭಿಣಿ ಆಗಿದ್ದಾರೆ ಎಂದು ತಿಳಿದ ಕೂಡಲೇ ಯಾವ ಮಗು ಇದೆ ಎಂಬುದರ ಬಗೆಗೆ ತಿಳಿದುಕೊಳ್ಳಲು ಭ್ರೂಣಲಿಂಗ ಪತ್ತೆಯನ್ನು ಮಾಡಿಸಿ, ಆನಂತರ ಅದು ಹೆಣ್ಣು ಭ್ರೂಣ ಇದೆ ಎಂದು ಖಾತರಿಯಾದಾಗ ಅದನ್ನು ಅಲ್ಲಿಯೇ ಸಾಯಿಸುವ ಕೆಲಸವು ಆಗುತ್ತಿತ್ತು. ಇದರಿಂದ ಎಷ್ಟೋ ಹೆಣ್ಣು ಮಕ್ಕಳು

ಜನಿಸುವುದನ್ನು ತಡೆಯಲಾಗಿತ್ತು. ಇಂತಹ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ ಸರ್ಕಾರವು ಅತ್ಯಂತ ಕಠಿಣ ಶಿಕ್ಷೆ ವಿಧಿಸುವ ಕಾಯಿದೆಯೊಂದನ್ನು ಜಾರಿಗೆ ತಂದು, ಇಂತಹ ಪ್ರಕರಣಗಳನ್ನು ಪಡೆಯಲು ಪ್ರಯತ್ನಿಸಲಾಗಿದೆ.

**2005ರ ಕೌಟುಂಬಿಕ ದೌರ್ಜನ್ಯ ನಿಷೇಧ ಕಾಯಿದೆಯು** ಭಾರತದ ಮಹಿಳೆಯರ ಸ್ಥಾನಮಾನದಲ್ಲಿ ಅನೇಕ ಮಹತ್ತರವಾದಂಥ ಬದಲಾವಣೆಗಳನ್ನು ಕಳೆದ ಹಲವು-ಹತ್ತು ಸಹಸ್ರಮಾನಗಳಲ್ಲಿ ಗುರುತಿಸಬಹುದು. ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಯಾಗಿ ತಳ್ಳಲಾಗಿದೆ. ಅವರನ್ನು ಮುಖ್ಯವಾಹಿನಿಗೆ ತರಲು ಅನೇಕ ಮಹಾನ್ ನಾಯಕರು ಹಾಗೂ ಸಮಾಜ ಸುಧಾರಕರು ಪ್ರಯತ್ನಿಸಿರುವುದರ ಪ್ರತಿಫಲವಾಗಿಯೇ ಇಂದು ಮಹಿಳೆಯರಿಗೆ ಸಂವಿಧಾನಿಕ ರಕ್ಷಣೆಗಳು ದೊರಕಿರುತ್ತವೆ. ಅದರಲ್ಲಿ ಈ 2005 ಕೌಟುಂಬಿಕ ದೌರ್ಜನ್ಯ ನಿಷೇಧ ಕಾಯಿದೆಯು ಒಂದಾಗಿರುತ್ತದೆ. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯವನ್ನು ತಡೆಯಲು ಭಾರತವೂ ಸಕಾರಾತ್ಮಕವಾದಂಥ ಕ್ರಮವನ್ನು ಕೈಗೊಂಡಿದೆ. ಆದ್ದರಿಂದಲೇ 2005ರಲ್ಲಿ ಈ ಕಾಯಿದೆಯನ್ನು ಜಾರಿಗೆ ತಂದಿರುತ್ತದೆ. ಈ ಕಾಯಿದೆಯ ಹಲವು ಪ್ರಧಾನ ಉದ್ದೇಶಗಳನ್ನು ಈ ಕೆಳಗಿನಂತೆ ದಾಖಲಿಸಲಾಗಿದೆ. ಅವುಗಳೆಂದರೆ; ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯವನ್ನು ತಡೆಯಲು ಭಾರತವೂ ಸಕಾರಾತ್ಮಕವಾದಂಥ ಕ್ರಮವನ್ನು ಕೈಗೊಂಡಿದೆ. ಆದ್ದರಿಂದಲೇ 2005ರಲ್ಲಿ ಈ ಕಾಯಿದೆಯನ್ನು ಜಾರಿಗೆ ತಂದಿರುತ್ತದೆ. ಈ ಕಾಯಿದೆಯ ಹಲವು ಪ್ರಧಾನ ಉದ್ದೇಶಗಳು ಈ ಕಎಳಗಿನಂತೆ ದಾಖಲಿಸಲಾಗಿದೆ. ಅವುಗಳೆಂದರೆ; ಕೌಟುಂಬಿಕ ಹಿಂಸಾಚಾರವು ನಿಸ್ಸಂದೇಹವಾಗಿ ಮಾನವ ಹಕ್ಕುಗಳ ವಿಷಯವೇ ಆಗಿದೆ. ಹಾಗೆಯೇ ಅಭಿವೃದ್ಧಿಗೆ ಗಂಭೀರವಾದಂಥ ತಡೆಯೇ ಆಗಿದೆ. 1994ರ ವಿಯನ್ನಾ ಒಪ್ಪಂದ, ಬೀಜಿಂಗ್ ಘೋಷಣೆ ಮತ್ತು 1995ರ ಪ್ಲಾಟ್ ಫಾರ್ಮ್ ಫಾರ್ ಆಕ್ಷ್ಯನ್ ಇದನ್ನು ಒಪ್ಪಿಕೊಂಡಿವೆ. ವಿಶ್ವಸಂಸ್ಥೆಯು ಮಹಿಳೆಯರ ವಿರುದ್ಧ ಎಲ್ಲಾ ರೀತಿಯ  ತಾರತಮ್ಯಗಳನ್ನು ಶಿಕ್ಷೆಗೆ ಒಳಪಡಿಸಿ ಎಂದು 1989ರ ಸಾಮಾನ್ಯ ಶಿಫಾರಸ್ಸು ಸಂಖ್ಯೆ ೩೩ರಲ್ಲಿ ತಿಳಿಸಿರುತ್ತದೆ. ವಿಶೇಷವಾಗಿ ಯಾವುದೇ ಕುಟುಂಬದಲ್ಲಿ ಸಂಭವಿಸುವ ಯಾವುದೇ ರೀತಿಯ ಹಿಂಸಾಚಾರದ ವಿರುದ್ಧ ಮಹಿಳೆಯರನ್ನು ರಕ್ಷಿಸಲು ರಾಜ್ಯ ಸರ್ಕಾರಗಳು ಕಾರ್ಯನಿರ್ವಹಿಸಬೇಕು. ಕೌಟುಂಬಿಕ ಹಿಂಸಾಚಾರವೂ ವ್ಯಾಪಕವಾಗಿ ಪ್ರಚಲಿತವಾಗಿದೆ ಮತ್ತು ಅದೃಶ್ಯವಾಗಿದೆ. ಕ್ರಿಮಿನಲ್ ಕಾನೂನಿನ ಅಡಿಯಲ್ಲಿ ಮಾತ್ರ ಈ ವಿದ್ಯಮಾನವನ್ನು ಪರಿಹರಿಸಲು ಯಾವುದೇ ನಾಗರೀಕ ಕಾನೂನು ಇರಲಿಲ್ಲ. ಮಹಿಳೆಯು ತನ್ನ ಪತಿ ಅಥವಾ ಅಳಿಯನಿಂದ ಕ್ರೌರ್ಯಕ್ಕೆ ಒಳಗಾಗಿದ್ದರೆ, ಆಕೆಯು 498ಎ ವಿಧಿಯ ಅಡಿಯಲ್ಲಿ ದೂರು ಸಲ್ಲಿಸಬಹುದು. ಭಾರತದ ಸಂವಿಧಾನದ 14, 15 ಮತ್ತು 21ನೇ ವಿಧಿಗಳ ಅಡಿಯಲ್ಲಿ ಖಾತರಿಪಡಿಸಿದ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ನಾಗರಿಕ ಕಾನೂನಿನಡಿಯಲ್ಲಿ ಪರಿಹಾರವನ್ನು ಒದಗಿಸಲು ಕಾನೂನನ್ನು ಜಾರಿಗೆ ತರಲು ಪ್ರಸ್ತಾಪಿಸಲಾಗಿರುತ್ತದೆ. ಇದು ಮಹಿಳೆಯರನ್ನು ಬಲಿಪಶುಗಳಾಗದಂತೆ ಸಂರಕ್ಷಿಸುವ ಮಹತ್ವದ

ಉದ್ದೇಶವನ್ನು ಹೊಂದಿದೆ. ಕೌಟುಂಬಿಕ ಹಿಂಸೆ ಮತ್ತು ಸಮಾಜದಲ್ಲಿಯ ಕೌಟುಂಬಿಕ ಹಿಂಸಾಚಾರವು ಸಂಭವಿಸುವುದನ್ನು ತಡೆಯುವುದು. ಈ ಕಾಯಿದೆಯಲ್ಲಿ ಪ್ರಧಾನವಾಗಿ ಐದು ಸ್ತಂಭಗಳಿವೆ. ಅವು ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ರಾಷ್ಟ್ರೀಯ ದಾಖಲೆಗಳನ್ನು ಜಾರಿಗೆ ತರಲು ಇವು ಆಧಾರವಾಗಿವೆ. ಅವುಗಳೆಂದರೆ; 1994ರ ವಿಯನ್ನಾ ಅಕಾರ್ಡ್, ಬೀಜಿಂಗ್ ಘೋಷಣೆ ಮತ್ತು 1995ರ ಕ್ರಿಯೆಯ ವೇದಿಕೆ, ಮಹಿಳೆಯರ ಮೇಲಿನ ಎಲ್ಲಾ ರೀತಿಯ ತಾರತಮ್ಯಗಳನ್ನು ತೆಗೆದು ಹಾಕುವ ಸಮಾವೇಶ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 1989ರ ಸಾಮಾನ್ಯ ಶಿಫಾರಸ್ಸಿನ ಸಂಖ್ಯೆ .. ಫಿಖಖ, ಭಾರತ ಸಂವಿಧನದ 14, 15 ಮತ್ತು 21ನೇ ವಿಧಿಗಳು.

ಹೀಗೆ, ಸಾಮಾನ್ಯವಾಗಿ ಕೌಟುಂಬಿಕ ಹಿಂಸಾಚಾರದ ಬಗೆಗೆ ಸಮಗ್ರ ಅಧ್ಯಯನವನ್ನು ಮಾಡುವ ಮೂಲಕ ಕೌಟುಂಬಿಕ ಹಿಂಸಾಚಾರದಿಂದ 2005ರ ಮಹಿಳೆಯರ ರಕ್ಷಣೆಯ ಕಾಯಿದೆಯನ್ನು ಮೌಲ್ಯಮಾಪನ ಮಾಡಲಾಗಿದೆ. ಇದು ಕೂಡ ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ತನ್ನದೇ ಆದಂಥ ಕಾರ್ಯವಿಧಾನವನ್ನು ಹೊಂದಿರುತ್ತದೆ.

2013ರ **ಅತ್ಯಾಚಾರ ನಿಷೇಧ ಕಾನೂನು ಪ್ರಕಾರ;** ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಯುವ ದೃಷ್ಟಿಕೊನದಿಂದಲೇ ಅಂದಿನ ಕೇಂದ್ರ ಸರ್ಕಾರವು 2011ರಲ್ಲಿ ಭಾರತದ ಅತ್ಯುನ್ನತ ಅಧಿಕಾರ ಶಕ್ತಿಕೇಂದ್ರವಾಗಿರುವಂಥ ಸಂಸತ್ತಿನಲ್ಲಿ ಅಂಗೀಕರಿಸಿರುತ್ತದೆ. ಆದರೆ ಅಧೀಕೃತವಾಗಿ 2012ನೇ ನವೆಂಬರ್ 14ರಂದು ಈ ಕಾಯಿದೆಯು ಜಾರಿಗೆ ಬಂದಿರುತ್ತದೆ. ಈ ಕಾಯಿದೆಯು ಕೆಳಗಿನ ಹಂತ ದಾಖಲಿಸಿರುವ ಅಂಶಗಳನ್ನು ಪ್ರಮುಖವಾಗಿ ಹೊಂದಿರುತ್ತದೆ. ಅವುಗಳೆಂದರೆ; ಈ ಕಾಯಿದೆಯ ಪ್ರಕಾರ; 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಲೈಂಗಿಕ ಚಟುವಟಿಕೆಗಳಿಗೆ ದುರುಪಯೋಗಪಡಿಸಿಕೊಂಡರೆ, ಅಂಥ ಪ್ರಕರಣಗಳಲ್ಲಿ ಭಾಗಿಯಾಗಿರುವವರಿಗೆ ಕಠಿಣ ಹಾಗೂ ಜೀವಾವಧಿ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ವಿಶೇಷ ನ್ಯಾಯಾಲಯಗಳು ಒಂದು ವರ್ಷದೊಳಗೆ ವಿಚಾರಣೆಯನ್ನು ಮುಗಿಸಬೇಕು. ದೌರ್ಜನ್ಯಕ್ಕೆ ಒಳಗಾದಂಥ ಮಕ್ಕಳ ಹೇಳಿಕೆಯನ್ನು ದಾಖಲೀಕರಣ ಮಾಡುವಾಗ ಅವರ ಗೌಪ್ಯತೆಯನ್ನು ರಕ್ಷಿಸಬೇಕು ಮತ್ತು ಸಹಾಯಕದ ನೆರವನ್ನು ಕೂಡ ಒದಗಿಸಬೇಕು. ಮಕ್ಕಳ ಕಲ್ಯಾಣ ಅಧಿಕಾರಿಗಳನ್ನು ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳನ್ನು ನೇಮಿಸಬೇಕು. ಹೀಗೆ ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಯಲಾಗುತ್ತದೆ. ಈ ಕಾನೂನನ್ನು ಅಪರಾಧ ಕಾನೂನು ತಿದ್ದುಪಡಿಯ ಕಾಯ್ದೆ ಎಂದು ಕರೆಯಲಾಗುತ್ತದೆ. ದೇಶದಲ್ಲಿ ಹೆಚ್ಚುತ್ತಿರುವ ಅತ್ಯಚಾರ ಪ್ರಕರಣಗಳನ್ನು ದಮನ ಮಾಡಲು ರಾಷ್ಟ್ರಾಧ್ಯಕ್ಷರು 2013ನೇ ಫೆಬ್ರವರಿ 3ರಂದು ಸುಗ್ರೀವಾಜ್ಞೆಯನ್ನು ಘೋಷಿಸಿದರು. ಇದೇ ವರ್ಷ ಮಾರ್ಚ್‌ನಲ್ಲಿ ಸಂಸತ್ತು ಇದನ್ನು ಅಂಗೀಕರಿಸಿರುತ್ತದೆ. ಇದು ಭಾರತೀಯ ದಂಡ ಸಂಹಿತೆ ಅಪರಾಧಿಗಳ ನೀತಿ–ನಿಯಮಗಳ ಸಂಹಿತೆ 1872ರ ಭಾರತೀಯ ಸಾಕ್ಷ್ಯಗಳ ಕಾಯಿದೆ 2012ರ ಪೊಕ್ಸೊ ತಿದ್ದುಪಡಿಯನ್ನು ಮಾಡಲಾಗಿದೆ. ಆ ಮೂಲಕ ಹೆಣ್ಣು ಮಕ್ಕಳ

ಮೇಲೆ ನಡೆಯುತ್ತಿರುವ ಹಾಗೂ ನಡೆಯಬಹುದಾದ ಅತ್ಯಾಚಾರಗಳನ್ನು ತಡೆಯುತ್ತಲೇ ಈ ಕಾಯಿದೆಯ ಮೂಲ ಉದ್ದೇಶವಾಗಿರುತ್ತದೆ. ಈ ಕಾಯಿದೆಯು ಕಠಿಣತೆಯನ್ನು ತಿಳಿಯದಿರುವ ಕಾಮುಕರು ದೇಶದ ವಿವಿಧ ಭಾಗಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮಹಿಳೆ ಮತ್ತು ಬಾಲಕಿಯರ ಮೇಲೆ ಅತ್ಯಾಚಾರವೆಸಗುತ್ತೀರುವುದರಿಂದ ಭಾರತವು ತಲೆತಗ್ಗಿಸಲೇ ಬೇಕಾದಂತಹ ಸಂಗತಿ ಇದಾಗಿದೆ.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ ಕಾಯಿದೆ-2013ರ ಕಾಯಿದೆಯು 2013ನೇ ಡಿಸೆಂಬರ್ 9 ರಂದು ಜಾರಿಗೆ ಬಂದಿರುತ್ತದೆ. ಇದರ ಪ್ರಕಾರ ಲೈಂಗಿಕ ಕಿರುಕುಳವೆಂದರೆ, ಕೆಟ್ಟನಡವಳಿಕೆ, ದೈಹಿಕ ಸಂಪರ್ಕ, ಅನುಚಿತವರ್ತನೆ, ಲೈಂಗಿಕ ಪೀಡಿತ ಮಾತುಗಳು, ಲೈಂಗಿಕ ಆಸೆ ತಿರುಸುವಂತೆ ಒತ್ತಾಯ ಮತ್ತು ನೀಲಿ ಚಿತ್ರಗಳನ್ನು ತೋರಿಸವುದು ಕೆಟ್ಟ ನಡವಳಿಕೆಯಾಗಿರುತ್ತದೆ. ಈ ಕಾಯಿದೆಯನ್ನು 1956ರಲ್ಲಿ ಸಂಸತ್ತು ಅಂಗೀಕರಿಸುವ ಮೂಲಕ ವೇಶ್ಯಾವೃತ್ತಿಯನ್ನು ನಿಷೇಧಿಸಿದೆ. ಇದನ್ನು ಮತ್ತೇ 1978 ಮತ್ತು 1986ರಲ್ಲಿ ತಿದ್ದುಪಡಿಗೆ ಒಳಪಡಿಸಿದ ಮೇಲೆ ಹೋದದಾಗಿ ಈ ಮೇಲಿನ ನಾಮಾಂಕಿತವನ್ನು ನೀಡಲಗಿರುತ್ತದೆ. ಈ ವ್ಯೇಶ್ಯಾವೃತ್ತಿಗೆಂದು ಮಕ್ಕಳನ್ನು ಕರೆತರುವ ವ್ಯಕ್ತಿಗಳಿಗೆ ಜೀವಾವಧಿ ಶಿಕ್ಷೆ ಅಥವಾ ಏಳು ವರ್ಷಗಳ ಕನಿಷ್ಠ ಜೈಲುವಾಸ ವಿಧಿಸಲಾಗುವುದು. ಇದೇ ಅಲ್ಲದೇ ಭಾರತೀಯ ದಂಡ ಸಂಹಿತೆಯ ಪ್ರಕಾರ, 18 ವರ್ಷಕ್ಕಿಂತ ಕಡಿಮೆ ಇರುವ ಹೆಣ್ಣು ಮಕ್ಕಳನ್ನು ಅನೈತಿಕ ವ್ಯವಹಾರಗಳಿಗೆ ಒಳಪಡಿಸುವುದಾಗಲೀ ಅಥವಾ ಮಾರಾಟ ಮಾಡಿದರೆ ಅಥವಾ ತಮ್ಮಲ್ಲಿ ಇಟ್ಟುಕೊಂಡರೇ ಅದು ಅಪರಾಧವಾಗುತ್ತದೆ ಎಂದು ಸೂಚಿಸಿರುತ್ತದೆ.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ ಕಾಯಿದೆ-2013ರ ಕಾಯಿದೆಯ ಪ್ರಮುಖ್ಯ ನಿಯಮಗಳು ಯಾವುವೆಂದರೆ; ಹತ್ತು ಮಂದಿಗಿಂತ ಹೆಚ್ಚಿನ ಉದ್ಯೋಗಿಗಳಿರುವ ಕಛೇರಿಗಳು, ನಾಲ್ಕು ಸದಸ್ಯರ ಆಂತರಿಕ ದೂರು ಸಮಿತಿಯನ್ನು ರಚಿಸಿ ಇದರಲ್ಲಿ ಶೇಕಡಾ 50ರಷ್ಟು ಮಹಿಳಾ ಸದಸ್ಯರು ಇರಬೇಕು.ಹತ್ತಕ್ಕಿಂತ ಕಡಿಮೆ ಉದ್ಯೋಗಿಗಳು ಇರುವ ಕಡೆ ಜಿಲ್ಲಾ ಕೇಂದ್ರದಲ್ಲಿರುವ ದೂರು ಸಮಿತಿಗೆ ದೂರು ಕೊಡಬಹುದು. ದೂರಿನ ಆಧಾರದ ಮೇಲೆ ವಿಚಾರಣೆ ನಡೆಸಿ ಮೂರು ತಿಂಗಳೊಳಗೆ ಸಂಸ್ಥೆಯ ಮಾಲೀಕರಿಗೆ ಅಥವಾ ಜಿಲ್ಲಾಧಿಕಾರಿಗಳಿಗೆ ತನ್ನ ವರದಿಯನ್ನು ನೀಡಬೇಕು. ಇದನ್ನು ಎರಡು ತಿಂಗಳೊಳಗಾಗಿ ಜಾರಿಗೊಳಿಸಬೇಕು. ಆರೋಪ ಸಾಬೀತಾದರೆ ತಪ್ಪಿಸ್ಥರು ಕ್ಷಮೆ ಕೇಳಲು ಅಥವಾ ಅವರಿಗೆ ಛೀಮಾರಿ ಹಾಕಲು ಅಥವಾ ಬಡ್ತಿ / ಇನ್‌ಕ್ರಿಮೆಂಟ್ ತಡೆಹಿಡಿಯಲು ಮತ್ತು ಸೇವೆಯಿಂದ ವಜಾ ಮಾಡಲು ಅವಕಾಶವಿದೆ. ಇದರ ಜೊತೆಗೆ ನಿಗಧಿತ ಅವಧಿಗೆ ಜೈಲು ಶಿಕ್ಷೆಯನ್ನು ಕೂಡ ವಿಧಿಸಬಹುದು. ಕಾಯಿದೆಯ 10ನೇ ವಿಧಿ ಅನ್ವಯ ವಿಚಾರಣೆಗೆ ಮೊದಲು ಸಂವಿಧಾನಕ್ಕೆ ಅವಕಾಶವಿದೆ. ಸುಳ್ಳು ದೂರನ್ನು ದಾಖಲಿಸಿದರೆ 500ರೂ ದಂಡ ಅಥವಾ ಒಂದು ವರ್ಷದವರೆಗೆ ಕೂಡ 5ರಷ್ಟು ವೇತನ ಕಡಿತ ಮಾಡಲು ಅವಕಾಶವಿದೆ. ಹೀಗೆ ಇದು ಕೂಡ ಮಾನವ ಹಕ್ಕುಗಳ ಆಚರಣೆಯಲ್ಲಿ ಕಾರ್ಯನಿರ್ವಹಿಸುತ್ತದೆ.

## ಗ್ರಂಥಋಣ

1. ರಾಜಶೇಖರ.ಎಚ್.ಎಂ, ಭಾರತ ಸಂವಿಧಾನ ಮತ್ತು ಸರ್ಕಾರ, 2015
2. ರಾಜಶೇಖರ್.ಎಸ್, ಭಾರತೀಯ ಸಮಾಜ, 2001
3. Aditi Kavarana, Equal Remuneration Act-1971, Research Internship Papers, Centre for Civil Society, 2001
4. Digumart Bhaskara Rao, Digumarti Pushpa Latha, International Encyelopaedia of Woman, 1998
5. Upadhyay. H.C, Status of Women in India, 1991
6. Jain.M.P. Indian Constitutional Law, 1987
7. Naiv Sankar Sen, Trafficking Women and Children in India, 2005
8. Rajendra K. Sharma, Industrial labour in India, 1997
9. Shashi Bala, Implementation of Maternity Benefict Act-1961, 2012
10. The Bonded Labour System (Abolition) Act, 1976
11. The Child Labour (Prohibition and Regulation) Act-1986, Government of India, 1986
12. The Commission for Protection of child Rights Act-2005
13. The Gazette of India, Governament of India, 2013
14. The Gazette of India, Government of India, 2016, The Child Labour (Prohibition and Regulation) Amendment Act-2016
15. The Juvenile Justice (Care and Protection of Children Act) – 2015
16. The Gazette of India, Ministry of Law and Justice, Government of India - 2015
17. The National Commission for Women Act-1999